ಮಹಾರಾಷ್ಟ್ರ ಕರ್ನಾಟಕ ಗಡಿ ವಿವಾದ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 974(301)

ಸದಸ್ಯರ ಹೆಸರು: ಶ್ರೀ ಮನೋಹರ್ ಪಿ.ಕಡೋಲ್ಕರ್ (ಉಚ್ಚಗಾಂವ್)

ಪ್ರಶ್ನೆ

1 ದೀರ್ಘಾವಧಿಯಿಂದ ಇತ್ಯರ್ಥವಾಗದೆ ಬಾಕಿ ಉಳಿದಿರುವ ಗಡಿ ವಿವಾದದ ಬಗ್ಗೆ ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ಸರ್ಕಾರದೊಂದಿಗೆ ಚರ್ಚಿಸಲು ತೀರ್ಮಾನಿಸಿದೆಯೇ?

ಉತ್ತರಿಸುವ ಮಂತ್ರಿಗಳು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು)

ಉತ್ತರ

1. ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದದ ವಿಷಯದಲ್ಲಿ ಮಹಾಜನ್ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಬೇಕೆಂಬುದೇ ಸರ್ಕಾರದ ಅಂತಿಮ ನಿಲುವಾಗಿದೆ. ಆದುದರಿಂದ, ಈ ವಿಷಯದಲ್ಲಿ ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ಸರ್ಕಾರದೊಂದಿಗೆ ಚರ್ಚಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ವಿದ್ಯುತ್ ಕಡಿತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 975(303)

ಸದಸ್ಯರ ಹೆಸರು: ಶ್ರೀ ಮನೋಹರ ಪುಷ್ಪಪ್ಪ ಕಾಡೋಲ್ಕರ್(ಉಚ್ಚಗಾಂವ್)

ಪ್ರಶ್ನೆ

ಅ. ವಿದ್ಯುತ್ ಕಡಿತವನ್ನು 6 ಗಂಟೆಯಿಂದ 3 ಗಂಟೆಯವರೆಗೆ ಕಡಿತಗೊಳಿಸಲು ಸರ್ಕಾರವು ಉದ್ದೇಶಿಸಲಾಗಿದೆಯೇ?

ಆ. ಹಾಗಿದ್ದಲ್ಲಿ ವಿದ್ಯುತ್ ಅಭಾವ ಹೋಗಲಾಡಿಸಲು ತೆಗೆದುಕೊಂಡ ಕ್ರಮವೇನು?

ಉತ್ತರಿಸುವ ಸಚಿವರು: ಶ್ರೀ ವೀರಕುಮಾರ ಅ. ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಆ. ಪ್ರಸ್ತುತಗಳ ರೋಡ್ ಶೆಡ್ಡಿಂಗ್ ವೇಳೆಯನ್ನು ಕಡಿತಗೊಳಿಸುವ ಪ್ರಸ್ತಾವನೆ ಇರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಸರ್ಕಾರಿ ನಿಗಮ ಮಂಡಳಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 977(539)

ಸದಸ್ಯರ ಹೆಸರು: ಶ್ರೀ ಮೋಹನ್.ಪಿ.ಸಿ(ಚಿಕ್ಕಪೇಟೆ)

ಪ್ರಶ್ನೆ

ಅ) ರಾಜ್ಯದಲ್ಲಿರುವ ವಿವಿಧ ಸರ್ಕಾರಿ ನಿಗಮಗಳು ಸಂಸ್ಥೆಗಳಾವುವು?

ಆ) ಅವುಗಳ ಅಧ್ಯಕ್ಷರು ಹಾಗೂ ಮೇನೆಜಿಂಗ್ ಡೈರಕ್ಟರ್‌ಗಳು ಯಾರು?

ಇ) 2000-2001ನೇ ವರ್ಷದಲ್ಲಿ ಅವೆಲ್ಲ ಗಳಿಸಿದ ಲಾಭ ಅಥವಾ ನಷ್ಟವೆಷ್ಟು?

ಈ) 2000-2001ರ ಅಂತ್ಯಕ್ಕೆ ನಷ್ಟದಲ್ಲಿರುವ ಈ ಸಂಸ್ಥೆಗಳು ಹೊಂದಿದ ಒಟ್ಟು ಹಾನಿ ಎಷ್ಟೆಷ್ಟು?

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು)

ಉತ್ತರ

ಅ) ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮದ ವ್ಯಾಪ್ತಿಯಲ್ಲಿರುವ ರಾಜ್ಯದ ವಿವಿಧ ಸರ್ಕಾರಿ ನಿಗಮಗಳು ಮತ್ತು ಸಂಸ್ಥೆಗಳ ವಿವರವನ್ನು 31.03.2000ದಲ್ಲಿ ಇದ್ದಂತೆ ಅನುಬಂಧ(1)ರಲ್ಲಿ ಕೊಡಲಾಗಿದೆ.

ಆ) ಅಧ್ಯಕ್ಷರು ಹಾಗೂ ಮೇನೆಜಿಂಗ್ ಡೈರೆಕ್ಟರ್‌ಗಳ ವಿವರಗಳನ್ನು ಅನುಬಂಧ(2)ರಲ್ಲಿ ನೀಡಲಾಗಿದೆ.

ಇ) 2000-2001ನೇ ವರ್ಷದಲ್ಲಿ ಸಂಬಂಧಿಸಿದಂತೆ ಪೂರ್ಣ ಮಾಹಿತಿ ಲಭ್ಯವಿರುವುದಿಲ್ಲವಾದುದರಿಂದ 1999-2000ನೇ ವರ್ಷದ ಮಾಹಿತಿ ಅನುಬಂಧ(3)ರಲ್ಲಿ ಕೊಡಲಾಗಿದೆ.